**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.2/ಪ್ರಾ.ಸಾ.4)**

ತಾಃ25-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಜಬಿಉಲ್ಲಾ |
| ತಂದೆಯ ಹೆಸರು | ಮೊಹಮ್ಮದ್ ಅಲಿ |
| ವಯಸ್ಸು | 39 ವರ್ಷ |
| ಉದ್ಯೋಗ | ಕಾರ್ ಡ್ರೈವರ್ |
| ವಾಸ ಸ್ಥಳ | ವೈಟ್ ಫೀಲ್ಡ್, ವಿಜಯನಗರ, ಬೆಂಗಳೂರು |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ</u>**

1. ಚಾಸಾ.1 ನನ್ನ ಅಣ್ಣ ಆಗಿರುತ್ತಾರೆ. ಮೃತ ನವಾಜ್ ಇವರು ಚಾಸಾ.1 ರವರ ಮಗನಾಗಿರುತ್ತಾರೆ. ನಾನು ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 5 ನೇ ಆರೋಪಿತರನ್ನು ನೋಡಿರುತ್ತೇನೆ. ಮೃತ ನವಾಜ್ ಇವರಿಗೆ ವಿವಾಹ ಆಗಿದ್ದು, ಆತನ ಮೊದಲನೇ ಹೆಂಡತಿಯ ಹೆಸರು ಹೀನಾ ಕೌಸರ್ ಆಗಿದ್ದು, ಎರಡನೆಯ ಹೆಂಡತಿಯ ಹೆಸರು ಆಯುಶಾ ಆಗಿದ್ದು, ಸದರಿ ಆಯುಶಾ ಇವರು ನ್ಯಾಯಾಲಯದ

ಮುಂದೆ ಹಾಜರಿದ್ದು, ಅವರು 5ನೇ ಆರೋಪಿ ಆಗಿರುತ್ತಾರೆ. ಮೃತ ನವಾಜ್ ಇವರನ್ನು ದಿನಾಂಕ 19-08-2018 ರಂದು ವರ್ತೂರಿನಲ್ಲಿದ್ದ ಮೃತ ನವಾಜ್ ಇವರ ಮನೆಯಲ್ಲಿ ಕೊಲೆ ಮಾಡಿರುತ್ತಾರೆ. ನವಾಜ್ ಸ್ವಂತ ಸರಕು ವಾಹನ ಇಟ್ಟುಕೊಂಡಿದ್ದು, ಅದನ್ನು ನಡೆಸಿ ಆದಾಯ ಗಳಿಸುತ್ತಿದ್ದರು. ನವಾಜ್ ವಾಸ ಇದ್ದ ಮನೆಯಲ್ಲಿ ಆತನ ಜೊತೆ 2ನೇ ಹೆಂಡತಿ (5ನೇ ಆರೋಪಿ) ವಾಸ ಇದ್ದರು. 5ನೇ ಆರೋಪಿ ಹಾಗೂ 1ನೇ ಆರೋಪಿ ಶಿವಕುಮಾರ್ ಇವರ ನಡುವೆ ಸಂಬಧ ಇದ್ದು, ಅವರಿಬ್ಬರೂ ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ನವಾಜ್ ಇವರನ್ನು ಮುಗಿಸಿಹಾಕಲು ತೀರ್ಮಾನಿಸಿದ್ದರು.

2. ಅವರಿಬ್ಬರೂ ಪ್ಲಾನ್ ಮಾಡಿಕೊಂಡು ಆ ದಿನ ರಾತ್ರಿ ವೇಳೆಯಲ್ಲಿ ನವಾಜ್ ಇವರನ್ನು ಬಾಡಿಗೆ ಇರುವುದಾಗಿ ಹೇಳಿ ಮನೆಯಿಂದ ಹೊರಗೆ ಕರೆಸಿ ಆತನ ತಲೆಗೆ ಕಬ್ಬಿಣದ ರಾಡ್ ನಿಂದ ಹೊಡೆದು, ಚಾಕುವಿನಿಂದ ಕತ್ತನ್ನು ಕೊಯ್ದು ಕಾರಿನಲ್ಲಿ ಹಾಕಿಕೊಂಡು ಕುದುರೆ ಮುಖಕ್ಕೆ ಹೋಗಿ ಭದ್ರಾ ನದಿಯಲ್ಲಿ ನವಾಜ್ ಇವರ ಶವವನ್ನು ಹಾಕಿರುತ್ತಾರೆ. ನವಾಜ್ ಇವರನ್ನು ಕರೆದಾಗ ಮನೆಯಿಂದ ಆಚೆ ಆತನಿಗೆ ಸೇರಿದ ಒಂದು ದ್ವಿಚಕ್ರ ವಾಹನದಲ್ಲಿ ಬರುವಾಗ ಘಟನೆ ಆಗಿರುತ್ತದೆ.

3. ಸಾಕ್ಷಿದಾರರು ದಿನಾಂಕ 20-08-2018ರ ಮಹಜರ್ ಅನ್ನು ನೋಡಿ ಅದನ್ನು ಕರ್ನಾಟಕ ಬ್ಯಾಂಕ್, ಎ.ಟಿ.ಎಮ್., ಚಿಂತಾಮಣಿ ಇದರ ಬಳಿ ಮಧ್ಯಾಹ್ನ 01:20ರಿಂದ 02:00 ಗಂಟೆಯ ವರೆಗೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ಸಾಕ್ಷಿದಾರರು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ.30 ಹಾಗೂ ನಿಪಿ.30(ಎ) ಎಂದು ಗುರುತಿಸಲಾಯಿತು. ಆ ದಿನ ಪೋಲೀಸರು ಮೊದಲಿಗೆ ನನ್ನನ್ನು ಠಾಣೆಗೆ ಕರೆಸಿದಾಗ ಠಾಣೆಯಲ್ಲಿ ಆರೋಪಿತರಾದ 1 ರಿಂದ 4 ರವರು ಹಾಜರಿದ್ದರು. ಆರೋಪಿತರು ಮೃತ ನವಾಜ್ ಇವರ ಜೇಬ್ ನಲ್ಲಿದ್ದ ಎ.ಟಿ.ಎಮ್. ಕಾರ್ಡ್ ಹೊರಗೆ ತೆಗೆದು ನಂತರ ಚಿಂತಾಮಣಿ ಎ.ಟಿ.ಎಮ್. ಸೆಂಟರ್ ಗೆ ಹೋಗಿ 400/- ರೂ ಹಣವನ್ನು ಬಿಡಿಸಿರುವುದಾಗಿ ಪೋಲೀಸರಿಗೆ ತಿಳಿಸಿದ್ದರು. ಅದಕ್ಕೂ ಮೊದಲು ಮೃತ ದೇಹವನ್ನು ಕುದುರೆ ಮುಖ ಭದ್ರಾ ನದಿ ನೀರಿಗೆ ಎಸೆದಿದ್ದರು. ಮೃತರ ಎ.ಟಿ.ಎಮ್. ಕಾರ್ಡ್ ಗೆ ಸಂಬಂಧಿಸಿದ password ಅನ್ನು 5 ನೇ ಆರೋಪಿ 1 ನೇ ಆರೋಪಿಗೆ ತಿಳಿಸಿದ್ದರು.

4. ಎ.ಟಿ.ಎಮ್. ಇದ್ದ ಜಾಗವನ್ನು 1 ಮತ್ತು 3 ನೇ ಆರೋಪಿ ಪೋಲೀಸರಿಗೆ ತೋರಿಸಿರುತ್ತಾರೆ. ನಿಪಿ.30 ಮಹಜರ್ ಮಾಡುವ ಸಮಯದಲ್ಲಿ ನನ್ನ ಜೊತೆ ಮಂಜು ಎಂಬುವರು ಸ್ಥಳದಲ್ಲಿ ಇದ್ದರು. ಮೃತನ ದೇಹದಲ್ಲಿ ಒಂದು ಕೀ ಚೈನ್, ಮೊಬೈಲ್ ಹಾಗೂ ಪರ್ಸ್ ಸಿಕ್ಕಿದ್ದು, ಅವುಗಳ ಪೈಕಿ ಮೊಬೈಲ್ ಹಾಗೂ ಪರ್ಸ್ ಅನ್ನು ಕುದುರೆ ಮುಖ ಭದ್ರಾ ನದಿ ನೀರಿನಲ್ಲಿ ಶವ ಬಿಸಾಡಿ ಬರುವಾಗ ಸದರಿ ವಸ್ತುಗಳನ್ನು ನದಿಗೆ ಎಸೆದಿರುತ್ತಾರೆ.

5. ಮೃತ ದೇಹ ದಿನಾಂಕ 20 ಅಥವಾ 21 ರಂದು ಪೋಲೀಸರಿಗೆ ಸಿಕ್ಕಿರುತ್ತದೆ. ಸಾಕ್ಷಿಯು ಪುನಃ ಮೃತ ದೇಹ ಪೋಲೀಸರಿಗೆ 28 ನೇ ತಾರೀಖಿನಂದು

ಕುದುರೆ ಮುಖ ಭದ್ರಾ ನದಿಯ ಬಳಿ ಒಂದು ಊರಿನ ಬಳಿ ಸಿಕ್ಕಿದ್ದು ಊರಿನ ಹೆಸರು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಮೃತ ದೇಹ ಸಿಕ್ಕ ಬಗ್ಗೆ ಪೋಲೀಸರು ಫೋನ್ ಮೂಲಕ ತಿಳಿಸಿದ್ದು, ಅದಕ್ಕಾಗಿ ನಾನು, ಚಾಸಾ.1 ಹಾಗೂ ಪೋಲೀಸರು ಸದರಿ ಸ್ಥಳಕ್ಕೆ ಹೋಗಿದ್ದೆವು. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಶವವನ್ನು ನದಿಯಿಂದ ಹೊರೆ ತೆಗೆದಿದ್ದು, ಶವದ ಮೇಲೆ ಇದ್ದ ಬಟ್ಟೆ ಹಾಗೂ ಕೀ ಚೈನ್ ಸಹಾಯದಿಂದ ಅದು ನವಾಜ್ ಇವರ ಶವ ಆಗಿರುವುದಾಗಿ ಗುರುತಿಸಿರುತ್ತೇವೆ. ಮೃತ ದೇಹದಲ್ಲಿ ಕ್ಯಾಂಟರ್ ವಾಹನದ ಕೀ ಚೈನ್ ಹಾಗೂ ಡಿಯೋ ವಾಹನದ ಒಂದು ಕೀ ಇತ್ತು. ಸದರಿ ಸ್ಥಳದ ಫೋಟೋಗಳನ್ನು ನೋಡಿದಲ್ಲಿ ನನಗೆ ಗುರುತಿಸಲು ಆಗುತ್ತದೆ.

6. ನವಾಜ್ ವಾಸ ಇದ್ದ ಮನೆಯನ್ನು ನಾನು ನೋಡಿದ್ದೆನು. ಸಾಕ್ಷಿದಾರರು ನಿಪಿ.3 ಫೋಟೋದಲ್ಲಿ ಕಂಡುಬರುವ ಮೃತರ ಮನೆಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿದಾರರು ಎ.ಟಿ.ಎಮ್. ಬಳಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕಲಂ.65(ಬಿ) ಸರ್ಟಿಫಿಕೇಟ್ ಹಾಜರು ಪಡಿಸಿಲ್ಲದ ಕಾರಣ ನಿಶಾನೆಯನ್ನಾಗಿ ಗುರುತಿಸಲು ಬರುವುದಿಲ್ಲ ಎಂದು ಶ್ರೀ.ಎಮ್.ಆರ್.ಎನ್. ವಕೀಲರು ತಕರಾರು ಮಾಡಿದ್ದು, ಅವರ ತಕರಾರಿಗೆ ಒಳಪಟ್ಟು ಸದರಿ ಫೋಟೋಗಳನ್ನು ನಿಪಿ.31 ರಿಂದ 33 ಎಂದು ಗುರುತಿಸಲಾಯಿತು.

7. ಸಾಕ್ಷಿದಾರರು ನಿಪಿ.19 ರಿಂದ 22 ಎಂದು ಗುರುತಿಸಿರುವ ಸ್ಥಳ ಹಾಗೂ ಅದರಲ್ಲಿರುವ ಮೃತ ದೇಹವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ನಿಪಿ.23 ರಿಂದ 25 ರಲ್ಲಿ ಕಂಡುಬರುವ ಮೃತ ದೇಹ ಹಾಗೂ ಕೀ ಚೈನ್ ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ಮು.ಮಾ.8 ರಿಂದ 12 ರ ಬಟ್ಟೆಗಳನ್ನು ನೋಡಿ ಅವು ಮೃತ ನವಾಜ್ ಗೆ ಸೇರಿರುವುದಾಗಿ ನುಡಿದಿರುತ್ತಾರೆ. ನಿಪಿ.25 ರಲ್ಲಿ ಕಂಡುಬರುವ ಕೀ ಚೈನ್ ಗಳನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ. ಸದರಿ ಕೀ ಚೈನ್ ಗಳು ಈ ದಿನ ನ್ಯಾಯಾಲಯದ ಮುಂದೆ ಲಭ್ಯ ಇರುವುದಿಲ್ಲ. ಮೃತ ದೇಹದ ಪಿ.ಎಮ್. ಅನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. ದಿನಾಂಕ 20-08-2018 ರಂದು ಬೆಳಗಿನ ಜಾವ 04ಃ20 ರ ಸಮಯದಲ್ಲಿ ಮೃತ ನವಾಜ್ ಇವರನ್ನು ಗಾಡಿ ಬಾಡಿಗೆ ಇರುವುದಾಗಿ ಹೇಳಿ ಆರೋಪಿತರು ಆತನನ್ನು ಮನೆಯಿಂದ ಆಚೆ ಕರೆಸಿ ಮೊದಲೇ ಪ್ಲಾನ್ ಮಾಡಿದ ಹಾಗೆ ಆತನನ್ನು ಕೊಲೆ ಮಾಡಿದ ವಿಚಾರ ನನಗೆ ತಿಳಿದು ಬಂತು ಎಂದರೆ ಸರಿ. ನಿಪಿ.30 ಮಹಜರ್ ಅನ್ನು ದಿನಾಂಕ 25-08-2018 ರಂದು ಮಾಡಿರುತ್ತಾರೆ ಎಂದರೆ ಸರಿ. ಮೃತ ದೇಹ ನದಿ ನೀರಿನಲ್ಲಿ ಸ್ವಲ್ಪ ದೂರ ಕೊಚ್ಚಿಕೊಂಡು ಹೋಗಿ ಹೆಬ್ಬನಗದ್ದೆ ಗ್ರಾಮದ ಬಳಿ ಪತ್ತೆ ಆಗಿರುತ್ತದೆ ಎಂದರೆ ಸರಿ. ನಾನು ನೋಡಿದ ಕೀ ಬಂಚ್ ಗಳನ್ನು

ಮೃತರು ತನ್ನ ಬೆಲ್ಟ್ ಲೂಪ್ ಮೇಲೆ ಸಿಗಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಆರ್.ಎನ್.ವಕೀಲರಿಂದಃ**

ಶ್ರೀ.ಎಮ್.ಆರ್.ಎನ್.ವಕೀಲರು ಸಿ.ಸಿ.ಹೆಚ್.64 ರಲ್ಲಿ Hon'ble High Court of Karnataka, Bangalore direction matter ಇದ್ದು, ಸಮಯ ಕೋರಿದ್ದು, ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.